



ಗೋಚರಿಸುತ್ತದೆ. ಅದು ಕಲ್ಲಂಗಡಿಯ ರುಚಿಯನ್ನು ಹೊಂದಿದ್ದು ಅಪೂರ್ವವಾಗಿದೆ ಎನ್ನುವುದನ್ನು ತಿಳಿಸಿ ಮುಂದಡಿ ಇಟ್ಟರು.

ಗ್ಯಾಕ್ ತಿರುಳಿನಲ್ಲಿ ಟೊಮ್ಯಾಟೊಗಿಂತ ಎಪ್ಪತ್ತು ಪಟ್ಟು ಹೆಚ್ಚು ಜೀವ ಸತ್ವಗಳಿವೆ ಎಂದಾಗ ಬೆರಗಾಗಿ ಹಣ್ಣನ್ನೇ ವೀಕ್ಷಿಸತೊಡಗಿದೆ. ಗ್ಯಾಕ್ ಹಣ್ಣನ್ನು ನಿತ್ಯ ಸೇವಿಸುತ್ತಿದ್ದರೆ ಸಂಧಿವಾತ, ಸುಟ್ಟಗಾಯ, ಚರ್ಮ ಸಮಸ್ಯೆ ನಿವಾರಣೆಯಾಗುವುದಲ್ಲದೆ ಏರು ರಕ್ತದೊತ್ತಡ ಸಹಜ ಸ್ಥಿತಿಗೆ ಬರುತ್ತದಂತೆ.

ಗೊಂಚಲು ಗೊಂಚಲಾಗಿ ಬಿಟ್ಟಿರುವ 3ರಿಂದ 5 ಸೆಂ.ಮೀ. ಉದ್ದದ ಹಣ್ಣನ್ನು ತೋರಿಸುತ್ತಾ, 'ಇದೇ ಜಪಾನೀಸ್ ಲಕೋಟೆ ಹಣ್ಣು' ಎಂದಾಗ ಅಚ್ಚರಿಯಾಯಿತು. ಒಂದು ಹಣ್ಣನ್ನು ಕಿತ್ತು ಅದರ ಸಿಪ್ಪೆ ತೆಗೆದು ಕೈ ಮುಂದೆ ಮಾಡಿ 'ತಿನ್ನಿ' ಎಂದರು. ಅದು ಬಿಳಿಯದಾಗಿದ್ದು ತಾಳಿಬೊಂಡದ ರುಚಿಯಿತ್ತು. ಇದು ರುಚಿಪೂರಿತ ಮಾತ್ರವಲ್ಲದೇ ಆರೋಗ್ಯಕ್ಕೆ ಪೂರಕ ಎಂಬುದನ್ನು ಮನವರಿಕೆ ಮಾಡಿದರು. ಮತ್ತೆ ಮುಂದಡಿಯಿರಿಸಿದಾಗ ಬದನೆಗಿಡದ ಎಲೆಯಂತಿರುವ ಪೊಗದಸ್ತಾದ ಎಲೆಗಳು ಅದರಲ್ಲಿ ಮೊಟ್ಟೆಯಾಕಾರದಲ್ಲಿರುವ ಹಣ್ಣು, ಅದರ ಮೇಲ್ಮೈಯಲ್ಲಿ ನೇರಳೆ ಬಣ್ಣದ ಚಿತ್ತಾರವಿದ್ದು ಸುಂದರವಾಗಿ ಕಾಣಿಸುತ್ತಿತ್ತು. ಅದನ್ನೇ ತದೇಕಚಿತ್ತದಿಂದ ನೋಡುತ್ತಿದ್ದಾಗ ಅದು 'ಪೆಪಿನೋ' ಎಂದರು ರಾಜೇಂದ್ರ. 'ಥೇಟ್ ಕರಬೂಜ ತಿಂದ ಹಾಗೆ ಆಗುತ್ತೆ. ಸಿಹಿ ಕಡಿಮೆಯಾಗಿರುವುದರಿಂದ, ಮಧುಮೇಹಿಗಳು ಕೂಡ ಸೇವಿಸಬಹುದು. ಕೊಟ್ಟಿಗೆ ಗೊಬ್ಬರ, ಸಾವಯವ ಗೊಬ್ಬರದಿಂದಲೇ ಪೊಗಸ್ತಾಗಿ ಬೆಳೆದಿದೆ' ಎಂದು ನನ್ನ ಪ್ರಶ್ನೆಗಳನ್ನು ಓದಿದವರಂತೆ ಹೇಳಿದರು.

ಮುಂದೆ ಕಾಣಿಸಿದ್ದು ಬುಗುರಿಯಾಕಾರದ ಹಳದಿ ಬಣ್ಣದ ಹಣ್ಣು. ಅದರ ಹೆಸರು 'ಎಗ್‌ಫ್ರೂಟ್'. ಅದರ ತಿರುಳು ಕೂಡ ಮೊಟ್ಟೆಯ ಬಿಳಿ ಪದರಿನಲ್ಲಿರುವ ಹಳದಿ ಬಣ್ಣದ ಹಾಗೆಯೇ ಇದೆ. 'ಹಣ್ಣು ತುಂಬಾ ಮಾಗಿದರೆ ಬಿರುಕುಗಳು ಕಾಣಿಸಿಕೊಳ್ಳುತ್ತವೆ' ಎಂದರು. 'ಈ ಹಣ್ಣನ್ನು ತಿಂದರೆ ಕಡಲೆಬೇಳೆ ಹೋಳಿಗೆ ತಿಂದಂತಾಗುತ್ತದೆ' ಎಂದು ಬಾಯಲ್ಲಿ ನೀರೂರಿಸಿದರು. ಖಿನ್ನತೆ, ತಲೆನೋವು, ಎದೆ ಉರಿ, ಏರು ರಕ್ತದೊತ್ತಡಕ್ಕೆ 'ಎಗ್‌ಫ್ರೂಟ್ ಸಿದ್ಧೌಷಧವಂತೆ.

ಗಿಡದಲ್ಲಿ ಕಚ್ಚಿಕೊಂಡ ಕಪ್ಪು ದ್ರಾಕ್ಷಿಯಂತೆ ಕಾಣುವ ಗೊಂಚಲು ಸೆಳೆಯಿತು. ಅದು 'ಜಬೋಟಕಾಬ' ಎನ್ನುವ ಹಣ್ಣು. ಅದರ ತೆಳುಸಿಪ್ಪೆ ತೆರೆದರೆ ಬಿಳಿ ತಿರುಳಿದೆ. ಹಣ್ಣು ತುಂಬಾ ಸಿಹಿ. ಅದರ ವೈಶಿಷ್ಟ್ಯವೇನೆಂದರೆ, ದಿನದಿಂದ ದಿನಕ್ಕೆ ಹಣ್ಣಿನ ರುಚಿ ಭಿನ್ನವಾಗಿರುತ್ತದೆ. 'ಮೊದಲ ದಿನ ಸೀಬೆಯ ಹಣ್ಣಿನಂತಿದ್ದರೆ, ಮರುದಿನ ಲಿಚಿಯನ್ನು ತಿಂದ ಹಾಗೆ ಅನ್ನಿಸುತ್ತೆ. ಎರಡು ದಿನದ ನಂತರ ಸೀತಾಫಲ ತಿಂದಂತಾಗುತ್ತದೆ' ಎನ್ನುವ ವಿವರಗಳನ್ನು ಕೇಳಿ ಬೆರಗಾದೆ.

ಒಂದು ಪುಟ್ಟ ಗಿಡದಲ್ಲಿ ಕೆಂಪು ಗೆಜ್ಜೆ ಕಟ್ಟಿದಂತೆ ಕಂಡಾಗ, 'ಅದು ಮಿರಾಕಲ್ ಯಾನೆ ಪವಾಡ ಹಣ್ಣು' ಎಂದರು ರಾಜೇಂದ್ರ. 'ಆ ಹಣ್ಣನ್ನು ತಿನ್ನುವಾಗ ಅಷ್ಟು ಸಿಹಿ ಎನ್ನಿಸುವುದಿಲ್ಲ. ಆದರೆ ಅರ್ಧ ಗಂಟೆಯ ನಂತರ ಯಾವ ಹಣ್ಣು ತಿಂದರೂ ತುಂಬಾ ಸಿಹಿ ಅನ್ನಿಸುತ್ತದೆ. ಹುಣಸೆ ಹುಳಿ ತಿಂದರೂ ತುಂಬಾ ಸಿಹಿ ಎನ್ನುವ ಅನುಭವವಾಗುತ್ತೆ' ಎಂದು ಪವಾಡ ಹಣ್ಣಿನ ಮಹಿಮೆ ವಿವರಿಸಿದರು. ಅದರ ಪಕ್ಕದಲ್ಲಿಯೇ ರಕ್ತದಂತೆ ಕೆಂಪಾದ ಗೊಂಚಲು ಗೊಂಚಲು. 'ವಾಟರ್ ಆಪಲ್'ನಂತೆ ಕಾಣುವ ಆ ಹಣ್ಣನ್ನು 'ಮಲಯನ್ ಆಪಲ್' ಎಂದು ಪರಿಚಯಿಸಿದರು. ಅಡಿಕೆ ಮತ್ತು ತೆಂಗಿನ ತೋಟದ ನಡುವೆ 'ಮಲಯನ್ ಸೇಬು' ಪಸಂದಾಗಿ ಬೆಳೆಯುತ್ತೆ ಎನ್ನುವುದನ್ನು ರಾಜೇಂದ್ರ ಅವರು ಸಾಧಿಸಿ ತೋರಿಸಿದ್ದಾರೆ.

ಮಕ್ಕೋತದೇವ, ಪಿಸ್ತಾ, ಸ್ಟ್ರಾಬೆರಿ, ಬರಿಬ್ಬಾ, ರಂಬೂಟನ್, ಕ್ಯಾಟ್‌ಫ್ರೂಟ್, ಮರಾಂಗ್, ಡೊರಿಯಾಣ್, ಮ್ಯಾಂಗೊಸ್ಟೀಸ್ – ಹೀಗೆ ಒಂದೆರಡಲ್ಲ, ನೂರಾರು ವಿದೇಶಿ ಹಣ್ಣುಗಳು ರಾಜೇಂದ್ರರ ತೋಟದಲ್ಲಿವೆ. ಈ 'ಫಲಪ್ರೀತಿ'ಗೆ ಕಾರಣವೇನು ಎಂದು ಪ್ರಶ್ನಿಸಿದರೆ, ರಾಜೇಂದ್ರ ಅವರು ಬೆಟ್ಟು ಮಾಡಿದ್ದು ಅನಿಲ್ ಬಳಂಜಾ ಎನ್ನುವವರ ತೋಟ!